ಸಾಕ್ಷಿಯನ್ನು ಪ್ರಮಾಣಿಕರಿಸಿದ ದಿನಾಂಕಃ 23.07.2026
ಪಾಟೀಸವಾಲು ವಾದಿ ಪರ ಶ್ರೀ ಎಂ ಹೆಚ್ ಜಿ ವಕೀಲರಿಂದಃ

ವಾದಿಯ ತಂದೆಯ ಹೆಸರು ಮಾಸನಗೌಡ ತಂದೆ ಭೀಮನಗೌಡ ಎಂದರೆ ಸರಿ. ಮಾಸನಗೌಡನ ಅಣ್ಣನ ಹೆಸರು ಕನಕನಗೌಡ ಭೀಮನಗೌಡ ಎಂದರೆ ಸರಿ. ಮಾಸನಗೌಡ ಮತ್ತು ಕನಕನಗೌಡರ ಮದ್ಯೆ ಪಾಲು ವಿಭಾಗ ಆಗಿರುವುದಿಲ್ಲ. ಈ ಕುರಿತು ದಾಖಲಾತಿಯನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

ಸರ್ವೆ ನಂ. 84 ರಲ್ಲಿ ಲಕ್ಷ್ಮಣಗೌಡರು 3 ಎಕರೆ 7 ಗುಂಟೆ ಜಮೀನನ್ನು ಸಾಗುವಳಿ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನು ಮಾಡುತ್ತಿದ್ದೇನೆ ಎಂದು ನುಡಿದಿರುತ್ತಾರೆ. ಉಳಿದ 3 ಚಿಲ್ಲರೆ ಜಮೀನನ್ನು ಕನಕನಗೌಡರ ಮಕ್ಕಳು ಸಾಗುವಳಿ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿಯು ನಾನು ಮಾಡುತ್ತಿದ್ದೇನೆ ಎಂದು ನುಡಿಯುತ್ತಾರೆ. ಸಾಕ್ಷಿಯು ಪುನಃ ಮುಂದುರೆದು ಅವರು ನಮಗೆ ಹೊಡೆದು ಬಡಿದು ಅವರೆ ಮಾಡುತ್ತಿದ್ದಾರೆ ಎಂದು ನುಡಿದಿರುತ್ತಾರೆ. ಸುಮಾರು 20 ವರ್ಷದಿಂದ ಆ ರೀತಿ ಮಾಡುತ್ತಿದ್ದಾರೆ. ಈ ಕುರಿತು ಪೋಲೀಸರಿಗೆ ದೂರು ನೀಡಿರುವುದಿಲ್ಲ.

ಸರ್ವೆನಂ. 21 ಹಿಸ್ಸಾ 3ಆ ರಲ್ಲಿ 1 ಎಕರೆ 8 ಗುಂಟೆ ಜಮೀನು ಮಾಸನಗೌಡರ ಪಾಲಿಗೆ ಬಂದಿತ್ತು ಎಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು ನಾನು ಮಾಡುತ್ತಿದ್ದೇನೆ ಎಂದು ನುಡಿದಿರುತ್ತಾರೆ. ಸದರಿ ಜಮೀನನ್ನು ಮಾಸನಗೌಡರು ಬೊಮ್ಮಯ್ಯರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ.

ಸರ್ವೆನಂ. 9 ಹಿಸ್ಸಾ 4ಆ ರಲ್ಲಿ 5 ಎಕರೆ 13 ಗುಂಟೆ ಜಮೀನು ಕನಕನಗೌಡ ತಂದೆ ಭೀಮನಗೌಡ ರವರ ಹೆಸರಿನಲ್ಲಿರುತ್ತದೆ ಎಂದರೆ ಸರಿಯಲ್ಲ. ಸರ್ವೆನಂ. 9

ಹಿಸ್ಸಾ 4ಬಿ ರಲ್ಲಿ 5 ಎಕರೆ 13 ಗುಂಟೆ ಜಮೀನು ಮಾಸನಗೌಡರ ಮಕ್ಕಳ ಹೆಸರಿನಲ್ಲಿರುತ್ತದೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳಲ್ಲಿ ವಾದಿ ಮತ್ತು ಅವರು ಕುಟುಂಬದವರು ಸ್ವಾಧೀನದಲ್ಲಿದ್ದರು ಕೂಡಾ ನಾನು ಸ್ವಾಧೀನದಲ್ಲಿದ್ದೆನೆ ಎಂದು ಸುಳ್ಳು ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ. ಮಾಸನಗೌಡ ಸಹೋದರ ಕನಕನಗೌಡ ತಂದೆ ಭೀಮನಗೌಡ ಮರಣಹೊಂದಿ ಸುಮಾರು 10-12 ವರ್ಷ ಆಗಿರುತ್ತದೆ ಎಂದರೆ ಸರಿ. ಅವರ ತಂದೆ ಭೀಮನಗೌಡ ಮರಣಹೊಂದಿ ಸುಮಾರು 30 ವರ್ಷ ಆಗಿರುತ್ತದೆ ಎಂದರೆ ಸರಿ. ಭೀಮನಗೌಡರ ಹೆಂಡತಿ ಮಾಸವ್ವ ಮರಣಹೊಂದಿ ಸುಮಾರು 50 ವರ್ಷ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಮಾಸವ್ವರವರ ತಾಯಿ ಗೌರಮ್ಮ ಯಾವಾಗ ಮರಣಹೊಂದಿದರು ಎಂದು ನನಗೆ ಗೊತ್ತಿಲ್ಲ. ಗೌರಮ್ಮಳ ತಾಯಿ ಬಾಲಮ್ಮ ಯಾವಾಗ ಮರಣಹೊಂದಿದರು ಎಂದು ನನಗೆ ಗೊತ್ತಿಲ್ಲ. ಬಾಲಮ್ಮ ಮರಣಹೊಂದಿ ಸುಮಾರು 60 ವರ್ಷ ಆಗಿರುತ್ತದೆ ಎಂದರೆ ಸರಿ.

ಬಾಲಮ್ಮರವರ ಗಂಡ ಕನಕನಗೌಡ ತಂದೆ ಭೀಮನಗೌಡ ಯಾವಾಗ ಮರಣಹೊಂದಿದರು ನನಗೆ ಗೊತ್ತಿಲ್ಲ. ನಾನು ಕನಕನಗೌಡ ತಂದೆ ಭೀಮನಗೌಡರನ್ನು ನೋಡಿರುವುದಿಲ್ಲ. ವಾದಿಯ ತಂದೆ ಮಾಸನಗೌಡರ ಸಹೋದರ ಕನಕನಗೌಡ ತಂದೆ ಭೀಮನಗೌಡ ಮತ್ತು ಬಾಲಮ್ಮಳ ಗಂಡ ಕನಕನಗೌಡ ತಂದೆ ಭೀಮನಗೌಡ ರವರ ಹೆಸರುಗಳು ಒಂದೇ ಇರುವುದನ್ನು ದುರುಪಯೋಗಪಡಿಸಿಕೊಂಡು ಓ ಎಸ ನಂ. 332/2016 ರಂತೆ ಸುಳ್ಳು ಪ್ರಕರಣ ದಾಖಲಿಸಿ ರಾಜೀ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಇವತ್ತಿನವರೆಗೂ ದಾವಾ ಸ್ವತ್ತುಗಳಲ್ಲಿ ವಾದಿ ಮತ್ತು ಅವರ ದೊಡ್ಡಪ್ಪನ ಕುಟುಂಬದವರು ಸಾಗುವಳಿ ಮಾಡುತ್ತಿದ್ದರು ನಾವು ಮಾಡುತ್ತಿದ್ದೇವೆ ಎಂದು ಸುಳ್ಳು ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ.

**(**ಈ ಹಂತದಲ್ಲಿ ವಾದಿ ಪರ ವಕೀಲರು ಪ್ರತಿವಾದಿ **3** ರಿಂದಂ **7** ರವರ ಪರ ವಕೀಲರು ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಳ್ಳುವುದಾಗಿ ನುಡಿದಿರುತ್ತಾರೆ**)**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು, ಕುಷ್ಟಗಿ**